# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ

## ವಂಚಕನಾದ ಯಾಕೋಬ



ಬರಹಗಾರರು: Edward Hughes
ಚಿತ್ರಲೇಖಕರು: M. Maillot; Lazarus
ಅಳವಡಿಸುವವರು: M. Kerr; Sarah S.
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.



ನಿಮ್ಮ ಕುಟುಂಬದಲ್ಲಿ ದೇವರು
ಯಾವಾಗಲಾದರೊ ಮಗುವನ್ನು
ಕೋಟ್ಟಿದ್ದಾರಾ? ಎಂಥಹಾ ಸಂತೋಷ!
ಇಸಾಕನು ಮತ್ತು ರೆಬೆಕ್ಕಳು
ಹಾಗೆ ಸಂತೋಷಿಸಿರಬಹುದು
ಏಕೆಂದರೆ ದೇವರು ಅವರಿಗೆ
ಅವಳಿ ಮಕ್ಕಳನ್ನು ಕೊಟ್ಟನು.

ಆಕೆಯ ಗರ್ಭದಲ್ಲಿರುವ ಶಿಶುಗಳು ಒಂದಕ್ಕೊಂದು ನೂಕಿಕೊಂಡಾಗ ಅವಳು ಪ್ರಾರ್ಥನೆ ಮಾಡಿದಳು ದೇವರು ಆಕೆಗೆ ನಿನ್ನಲ್ಲಿ ಎರಡು ಜನಾಂಗಗಳಿವೆ, ಕಿರಿಯದು ದೊಡ್ಡದು, ಸಾಮಾನ್ಯವಾಗಿ ಹಿರಿಯದು ದೊಡ್ಡದಾಗಿರುತ್ತದೆ. ಕೊನೆಗೂ ಮಕ್ಕಳು ಜನಿಸಿದರು.



ಆ ಅವಳಿ ಮಕ್ಕಳು ಒಂದೇ ರೀತಿ ಇರಲಿಲ್ಲ, ಹಿರಿಯ ಮಗನಾದ ಏಸಾವನಿಗೆ ತುಂಬಾ ಕೂದಲುಗಳು ಇದ್ದವು ಮತ್ತು ಆತನು ಬೇಟೆಯಾಡುವದರಲ್ಲಿ ನಿಪುನನಾದನು. ಯಾಕೋಬನು ಮೃದುವಾದ ಚರ್ಮವನ್ನು ಹೊಂದಿ,ಮನೆಯ ಸುತ್ತ ಚಟವಟಿಕೆಯಿಂದಿರುತ್ತಿದ್ದನು. ಇಸಾಕನು ಏಸಾವನನ್ನು ಪ್ರೀತಿಸಿದನು ರೆಬೆಕ್ಕಳು ಯಾಕೋಬನನ್ನು ಪ್ರೀತಿಸಿದಳು.



ಒಂದು ದಿನ ಏಸಾವನಿಗೆ ತುಂಬಾ ಹಸಿವೆ ಆಗಿದ್ದರಿಂದ ನನನೆ ತಿನ್ನಲು ಅಹಾರ ಕೊಡು ಎಂದು ಯಾಕೋಬನನ್ನು ಬೇಡಿಕೋಂಡನು. ಯಾಕೋಬನನು ಅವನಿಗೆ ನಿನ್ನ ಚೊಚ್ಚಲುತನದ ಹಕ್ಕನ್ನು ಮಾರಿಬಿಡು ಎಂದು ಕೇಳಿಕೋಂಡನು.



ದೇವರು ಇಟ್ಟಿದ್ದ ಚೊಚ್ಚಲುತನದ ಹಕ್ಕನ್ನು ಇಸಾವನು ತಾತ್ಸಾರಮಾಡಿದನು. ಇಸಾವನು ಹಕ್ಕನ್ನು ಮಾರಿಬಿಟ್ಟದ್ದರಿಂದ ಯಾಕೋಬನು ತನ್ನ ತಂದೆ ಸತ್ತ ನಂತರ ಅವನೆ ಮನೆಯ ನಾಯಕನಾಗುವನು.

ಒಂದು ರಾತ್ರಿ ದೇವರು ಇಸಾಕನೊಂದಿಗೆ ಮಾತನಾಡಿ. "ನಾನೇ ನಿನ್ನ ತಂದೆಯಾದ ಅಬ್ರಹಾಮನ ದೇವರು ನಾನೇ ನಿನ್ನೊಂದಿಗಿದ್ದೇನೆ, ನಾನು ನಿನ್ನ ಸಂತತಿಯವರನ್ನು ಆಶೀರ್ವದಿಸುವೆನು ಅಂದನು".



ಇಸಾಕನು ದೇವರನ್ನು ಆರಾದಿಸಿದನು, ಆದರೆ ಎನ್ನೋಬ್ಬ ಮಗನಾದ ಏಸಾವನು ಹಿತ್ತಿಯ ಜನಾಂಗದ ಇಬ್ಬರುನ್ನು ಮದುವೆಯಾದನು, ಅವರು ದೇವರನ್ನು ಲಕ್ಷೀಸುತ್ತಿರಲಿಲ್ಲ.





ಇಸಾಕನು ಮುದುಕನಾಗಲು ಏಸಾವನಿಗೆ ನನಗೆ ತಿನ್ನಲು ಬೇಟೆಯಾಡಿದ ತಾಜಾ ಮಾಂಸವನ್ನು ಕೊಡು ಆಗ ನಾನು ನಿನ್ನನ್ನು ಆಶಿರ್ವದಿಸುವೆನು ಅಂದನು. ಈ ಆಶಿರ್ವಾದವು ತಂದೆಯಿಂದ ತನ್ನ ಚೊಚ್ಚಲ ಮಗನಿಗೆ ಕೊಡುವುದಾಗಿತ್ತು, ಏಸಾವನು ಬೇಟೆಯಾಡಲು ಹೊರಟನು. ಆದರೆ ರೆಬೆಕ್ಕಳು ಇದನ್ನು ಕೇಳಿಸಿಕೊಂಡು ಯಾಕೋಬನಿಗೆ ಆಶಿರ್ವಾದ ಸಿಗಬೇಕೆನ್ನುವುದು ಅವಳ ಬಯಕೆಯಾಗಿತ್ತು.



ರೆಬೆಕ್ಕಳು ಒಂದು ಉಪಾಯ ಮಾಡಿ ಇಸಾಕನಿಗೆ ಇಷ್ಟವಾದ ಊಟವನ್ನು ಸಿದ್ಧಮಾಡಿ, ಯಾಕೋಬನಿಗೆ ಏಸಾವನಂತಹ ಉಡುಪನ್ನು ಮತ್ತು ಆಡಿನ ಚರ್ಮವನ್ನು ಕೈಗಳಿಗೂ ಮತ್ತು ಕೊರಳಿಗೆ ಸುತ್ತಿದಳು. ಇಸಾಕನಿಗೆ ಕಣ್ಣು ಮೊಬ್ಬಾಗಿ ಹೊದದ್ದರಿಂದ ಮೋಸಹೊದದ್ದು ತಿಳಿಯಲಿಲ್ಲ.

ಯಾಕೋಬನು ಇಸಾಕನಿಗೆ ಆಹಾರವನ್ನು ತಂದನು. ಇಸಾಕನು, ನೀನು ಯಾಕೋಬನ ಹಾಗೆ ಮಾತನಾಡುತ್ತಿ, ಆದರೆ ನಿನ್ನ ಕೈಗಳು ಇಸಾವನ ಕೈಗಳ ಹಾಗೆ ಅದೆ ಅಂದನು. ಆಗ ಆಹಾರವನ್ನು ತಿಂದು, ಮೊಳಕಾಲನ್ನೂರಿದ ತನ್ನ ಮಗನಾದ ಯಾಕೋಬನನ್ನು ಇಸಾವನೆಂದು ತಿಳಿದು ಆಶೀರ್ವದಿಸಿದನು.



ಯಾಕೋಬನು ಹೋದ ನಂತರ ಇಸಾವನು ಇಸಾಕನ ಹತ್ತಿರ ಬಂದು "ಇಲ್ಲಿದೆ ನೀನು ಕೇಳಿದ ಆಹಾರ" ಅಂದನು. ಇಸಾಕನು ಯಾವುದೂ ತಂತ್ರದಲ್ಲಿ ಸಿಕ್ಕಿ ಹಾಕಿಕೊಂಡಿರಬಹುದೆಂದು ತಿಳಿದುಕೊಂಡನು, ನಾನು ಕೊಟ್ಟಂತ ಆಶಿರ್ವಾದವನ್ನು ಹಿಂಪಡೆಯಲು ಸಾದ್ಯವಿಲ್ಲ ಎಂದು ಹೇಳಿ ಅತ್ತನು. ಇಸಾವನು ಯಾಕೋಬನ ಮೇಲೆ ಕೋಪಗೊಂಡು ಆತನನ್ನು ಕೊಲಲ್ಲು ನಿರ್ಧರಿಸಿದನು.



ರೆಬೆಕ್ಕಳು ಇಸಾವನ ಬೆದರಿಕೆಯ ಮಾತನ್ನು ಕೇಳಿಸಿಕೊಂಡು "ನೀನು ನಿನ್ನ ಚಿಕ್ಕಪ್ಪನ ಮನೆಗೆ ಹೋಗು ಎಂದು ಯಾಕೋಬನಿಗೆ ಹೇಳಿ, ನಿನ್ನ ಅಣ್ಣನಿಗೆ ನೀನು ಮಾಡಿದ ಕಾರ್ಯವನ್ನು ಮರೆಯುವವರೆಗೆ ಅಲ್ಲೆ ಇರು ಅಂದಳು. ಇಸಾಕನು ಯಾಕೋಬನಿಗೆ ಹೆಂಡತಿಯನ್ನು ಹುಡುಕಿಕೊಳ್ಳಲು, ತನ್ನ ತಾಯಿಯ ಮನೆಯಿಂದ ತರಲು ಒಪ್ಪಿಕೊಂಡನು. ಆಗ ಯಾಕೋಬನು ಅಲ್ಲಿಂದ ಹೊರಟನು.



ಆ ರಾತ್ರಿ
ಯಾಕೋಬನು ಒಂದು
ಕಡೆ ವಿಶ್ರಾಂತಿ ಪಡೆಯಲು
ಕಲ್ಲನ್ನು ತಲೆದಿಂಬಾಗಿ
ಉಪಯೋಗಿಸಿಕೊಂಡು,
ಮಲಗಿದನು, ಆತನು
ಒಬ್ಬಂಟಿಗನಾದ್ದರಿಂದ, ...



... ಹೆದರಿರಬಹುದು,
ಆದರೆ ಆತನು
ಒಬ್ಬಂಟಿಗನಾಗಿರಲಿಲ್ಲ,
ದೇವರು ಆಶ್ಚರ್ಯಕರ
ರೀತಿಯಲ್ಲಿ ಅವನೊಂದಿಗೆ
ಕನಸಿನಲ್ಲಿ
ಮಾತನಾಡಿದನು.



ನಾನೆ ನಿನ್ನ ತಂದೆಯಾದ ಅಬ್ರಹಾಮನ ಇಸಾಕನ
ದೇವರು, ನಾನೇ ನಿನೋಂದಿಗಿದ್ದೇನೆ, ನಾನು ಈ ದೇಶವನ್ನು ನೀನಗೆ
ಸ್ವಾಸ್ಥ್ಯವಾಗಿ ಕೋಡುವೇನು, ನಿನ್ನ ಕುಟುಂಬದಿಂದ ಲೋಕದ ಎಲ್ಲಾ
ಜನರು ಆಶಿರ್ವದಿಸಲ್ಪಡುವರು ಅಂದನು. ದೇವರು ಮಾತಾಡಿದನು
ಆಗ ಯಾಕೋಬನು ನಿದ್ರೆಯಿಂದ ಎದ್ದನು,
ಮತ್ತು ಹೆದರಿಕೊಂಡನು.

ಯಾಕೋಬನ ಚಿಕ್ಕಪ್ಪನಾದ ಲಾಬಾನನು ಬರಮಾಡಿಕೊಂಡನು.
ಯಾಕೋಬನು ರಾಹೇಲಳನ್ನು ಪ್ರೀತಿಸಿದನು.
ರಾಹೆಲಳನ್ನು ಮದುವೆಮಾಡಿಕೊಳಲು
ಯಾಕೋಬನು ಲಾಬಾನ ಹತ್ತಿರ ಏಳು
ವರ್ಷ ಕೇಲಸಮಾಡಿದನು ಆದರೆ
ಮದುವೆದಿನದ



ರಾತ್ರಿ ಲಾಬಾನನು
ಯಾಕೋಬನಿಗೆ
ಮೋಸಮಾಡಿದನು.

ಯಾಕೋಬನು ಇವಳು ಲೇಯಳು, ರಾಹೇಲಳು ಅಲ್ಲ!!! ಯಾಕೆ ನನಗೆ ಮೋಸಮಾಡಿದಿ ಎಂದು ಕೇಳಿದ್ದಕ್ಕೆ, ಲಾಬಾನನು ಮೊದಲು ಹಿರಿ ಮಗಳಿಗೆ ಮದುವೆ ಮಾಡಬೇಕು ಎಂದು ಹೇಳಿದನು. ಇನ್ನೂ ಏಳು ವರುಷ ಕೆಲಸ ಮಾಡಿ ರಾಹೇಲಳನ್ನು ಮದುವೆಮಾಡಿಕೊ ಎಂದನು.

ಯಾಕೋಬನು ಅದಕ್ಕೆ ಒಪ್ಪಿಕೊಂಡು ತಾನು ಇಸಾಕ ಮತ್ತು ಇಸಾವನಿಗೆ ಮಾಡಿದ ಮೋಸವನ್ನು ನೆನಪಿಸಿಕೊಂಡಿರಬಹುದು.





ಯಾಕೋಬನಿಗೆ ಹನ್ನೆರಡು ಗಂಡು ಮಕ್ಕಳು ಇದ್ದರು. ವರ್ಷಗಳು ಕಳೆದಂತೆ ತನ್ನ ಬಂದುಗಳ ಬಳಿಗೆ ತಿರಿಗಿ ಹೋಗಲು ಬಯಸಿದನು, ಅದು ಕಾನಾನ ದೇಶ, ಅಲ್ಲಿ ಯಾಕೋಬನ ತಂದೆ ತಾಯಿ ಇದ್ದರು. ಆದರೆ ಅಲ್ಲಿ ಏಸಾವನು ಸಹ ಇದ್ದನು. ಆತನು ಯಾಕೋಬನನ್ನು ಕೊಲ್ಲುತ್ತೆನೆ ಎಂದು ನಿರ್ದರಿಸಿಕೊಂಡಿದ್ದನು.



ಒಂದು ದಿನ ದೇವರು ಯಾಕೋಬನಿಗೆ "ನೀನು ನಿನ್ನ ಸ್ವದೇಶಕ್ಕೆ ತಿರುಗಿ ಹೋಗು" ಎಂದು ಹೇಳಿದನು. ಯಾಕೋಬನು ತನ್ನ ಕುಟುಂಬದವರನ್ನು ಮತ್ತು ದನಕುರಿಗಳನ್ನು ಕರೆದುಕೊಂಡು ಬಂದುಗಳ ಮನೆಗೆ ಹೊರಟನು, ಇದು ಸುರಕ್ಷಿತವಾಗಿತ್ತಾ?



ಇದು ಒಂದು ಒಳ್ಳೆಯ ಪ್ರಯಾಣವಾಗಿತ್ತು.
ಏಸಾವನು ತನ್ನ ನಾಲ್ಕುನೂರು ಜನರೊಂದಿಗೆ
ಯಾಕೋಬನನು ಬೇಟಿಯಾದನು.
ಆದರೆ ಯಾಕೋಬನಿಗೆ ಯಾವುದೆ
ನೋವನ್ನುಂಟುಮಾಡದೆ, ಬದಲಾಗಿ
ದೊಡ್ಡ ಅಪ್ಪುಗೆಯನ್ನು ಕೋಟ್ಟನು.
ಯಾಕೋಬನು ಮತ್ತು ಏಸಾವನು
ಒಂದಾಗಿದ್ದರಿಂದ



ಯಾಕೋಬನು
ಸುರಕ್ಷಿತವಾಗಿ ಮನೆಯಲ್ಲಿದ್ದನು.

# ವಂಚಕನಾದ ಯಾಕೋಬ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**ಆದಿಕಾಂಡ 25–33**

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು  ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16